

## ಕೀಲು ಕುಂಭ

ಶಿವಮೊಗ್ಗ ಜಿಲ್ಲೆ ಮಲೆನಾಡು ಭಾಗದಲ್ಲಿ ನಾಮಧಾರಿ ಒಕ್ಕಲಿಗ ಜನಾಂಗದಲ್ಲಿ ಮದುವೆ ಮನೆಯಲ್ಲಿ ಚಪ್ಪರ ಊಟ ಸಂದರ್ಭದಲ್ಲಿ ವಿಶಿಷ್ಟ ಸಂಪ್ರದಾಯವಿದೆ. ಈ ಚಿತ್ತಾರ ಮಾಡಿದ ಮಡಿಕೆಗಳಲ್ಲಿ ನೀರು ತುಂಬಿಸಿ ತುಳಸಿಕಟ್ಟೆ ಮುಂದೆ ಸೋದರಮಾವನ ಹತ್ತಿರದ ಸಂಬಂಧಿಗಳು ಒಬ್ಬೊಬ್ಬರಾಗಿ ತಲೆ ಮೇಲೆ ಹೊತ್ತು ತರುತ್ತಾರೆ. ಇವುಗಳನ್ನು ಮೂರು ಕಂಬದಂತೆ ಇಟ್ಟು ದಾರ ಕಟ್ಟಿ ಪೂಜಿಸುವುದು ಸಂಪ್ರದಾಯ. ಈ ಸುಂದರ ಚಿತ್ತಾರದ ಕುಂಭಗಳನ್ನು ನೂರಾರು ವರ್ಷಗಳಿಂದ ಕಾಯ್ದಿರಿಸಿಕೊಂಡು ಬಂದಿದ್ದಾರೆ. ಅಟ್ಟದ ಮೇಲೆ ಜೋಪಾನವಾಗಿ ಇರಿಸಿದ ಕುಂಭಗಳನ್ನು ಮದುವೆ ಮನೆಗಳಲ್ಲಿ ಅಲಂಕರಿಸಿ ಪೂಜೆ ಮಾಡುವ ಸಂಪ್ರದಾಯ ಆಧುನಿಕ ಕಾಲದಲ್ಲೂ ಇರುವುದು ವಿಶೇಷ.

**ಚಿತ್ರ-ಬರಹ: ಒಡ್ಡಿನಬೈಲು ವೆಂಕಟೇಶ, ಹೊಸನಗರ**



## ಕೆಂಜಿಗದ ಬೃಹತ್ ಗೂಡು

ನಮ್ಮ ಅಣ್ಣನವರ ಕಾಫಿ ತೋಟದಲ್ಲಿ ಸುತ್ತಾಡುತ್ತಿದ್ದಾಗ ಸಿಲ್ವರ್ ಮರದ ಕೊಂಬೆಯೊಂದರಿಂದ ನೇತುಬಿದ್ದಿದ್ದ ಈ ಗೂಡು ಕಣ್ಣಿಗೆ ಬಿತ್ತು. ಸುಮಾರು ನಾಲ್ಕೈದು ಅಡಿಗಳಷ್ಟು ಎತ್ತರ ಹಾಗೂ ಒಂದೂವರೆಯಿಂದ ಎರಡು ಅಡಿಗಳಷ್ಟು ಅಗಲವಿದ್ದ ಈ ಗೂಡನ್ನು ದೊಡ್ಡ ಕೆಂಪಿರುವೆಗಳು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದವು. ಒಂದೇ ರೀತಿಯ ಎಲೆಗಳನ್ನು ಜೋಡಿಸಿ ಇಷ್ಟು ದೊಡ್ಡ ಗೂಡನ್ನು ಕಟ್ಟುವುದರ ಹಿಂದಿನ ಶ್ರಮ ನೋಡಿದಾಗ ಕ್ರಿಮಿಕೀಟಗಳಿಂದಲೂ ನಾವು ಕಲಿಯುವುದು ಸಾಕಷ್ಟಿದೆ ಎನ್ನಿಸುತ್ತದೆ. ಗೂಡಿನ ಹೊರಭಾಗದಲ್ಲೇ ನೂರಾರು ಕೆಂಪಿರುವೆಗಳು ಓಡಾಡುತ್ತಿದ್ದವು. ಹಾಗಿದ್ದ ಮೇಲೆ ಗೂಡಿನೊಳಗೆ ಸಾವಿರಾರು ಸಂಖ್ಯೆಯಲ್ಲಿ ಇದ್ದಿರಬಹುದೇನೋ. ದೊಡ್ಡ ಕೆಂಪಿರುವೆಗಳಿಗೆ ಕೆಂಪು ಗೊದ್ದ, ಕೆಂಜಿಗ ಇತ್ಯಾದಿ ಕರೆಯುತ್ತಾರೆ.

**-ಬಿ.ಎಸ್. ರಾಜಲಕ್ಷ್ಮಿ, ಹಾಸನ**



## ಭೂತರಾಯನ ಗುಡಿ!

ಕಾಡಲ್ಲಿ ಬಿದ್ದ ಕಾಡ್ಗಲ್ಲುಗಳನ್ನೇ ಹೇಗೇಗೋ ಪೇರಿಸಿ ಗೋಪುರದಂತೆ ಇಟ್ಟಿರುವ ಈ ಭೂತರಾಯನ ಗುಡಿ ಯಾವ ರೀತಿಯಲ್ಲೂ ಕಲಾತ್ಮಕವಾಗಿಲ್ಲ. ಇದನ್ನು ಕಟ್ಟಿರುವವರು ಗುಡಿಕಾರರೂ ಅಲ್ಲ. ಆದರೆ ಈ ಗುಡಿಯಂತ ಗೋಪುರ ಕಾಡಿಗರು ಕಟ್ಟಿರುವಲ್ಲಿ ಒಂದು ನಿಯಮವಿದೆ. ಈ ಗೋಪುರವನ್ನು ಪ್ರದಕ್ಷಿಣೆ ಮಾಡಲು ಅದರ ಸುತ್ತ ನೆಟ್ಟಿರುವ ಶಿಲಾ ಪಥದಲ್ಲಿ ಏಳು ಸುತ್ತಿನ ರಚನೆಯಿದೆ. ಆ ಪಥಗಳು ಪರಸ್ಪರ ಎಲ್ಲೂ ಸಂಪರ್ಕವಿಲ್ಲದೆ ಎಲ್ಲಿಂದ ಗೋಪುರ ಸುತ್ತಲು ಪ್ರಾರಂಭಿಸಿರುತ್ತಾರೋ ಏಳು ಸುತ್ತು ಹಾಕಿದ ಮೇಲೆ ಅದೇ ಸ್ಥಳಕ್ಕೆ ಬಂದು ಹೊರ ಹೋಗುವ ವಿನ್ಯಾಸ ಮಾತ್ರ ಸೋಜಿಗವಾಗಿದೆ. ಯಾವ ನಿಯಮ/ ತತ್ವ ಇದರಲ್ಲಿ ಅಡಕವಾಗಿದೆಯೋ ಯಾರಿಗೂ ತಿಳಿದಿಲ್ಲ. ಉದ್ದೇಶರಹಿತವಾಗಿ ಈ ನಿರ್ಮಾಣ ಆಗಿರಲಿಕ್ಕಿಲ್ಲ. ಕಟ್ಟೋಣದ ಹಿನ್ನೆಲೆಯಲ್ಲಿ ಯಾವುದೋ ಒಂದು ಪ್ರಾಕೃತಿಕ ತತ್ವವಿದ್ದು, ಅದರ ಪರಿಪಾಲನೆಯಿಂದ ಫಲ ಪ್ರಾಪ್ತಿ ಇದ್ದೇ ಇದೆ.

ಅಂದ ಹಾಗೆ ಈ ರಚನಾಗೋಪುರ ಇರುವುದು ಬೆಂಗಳೂರಿನಿಂದ 20 ಕಿ.ಮೀ. ದೂರದಲ್ಲಿರುವ ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನವನದಲ್ಲಿನ ನರಸಿಂಹಸ್ವಾಮಿ ದೇವಸ್ಥಾನದ ಹಿಂದಿನ ಕಾಡಿನಲ್ಲಿ, ಕಾಡ ಹಾದಿಯಲ್ಲಿ ಇದೆ.

**-ಎಸ್.ಓಂಕಾರಯ್ಯ ತವನಿಧಿ, ದಾವಣಗೆರೆ**